# ಸಮಾನ ಶಿಕ್ಷಣ

ಇತ್ತೀಚೆಗೆ ಸರ್ಕಾರಿ ಶಾಲೆಗಳನ್ನು ಕುರಿತ ಚರ್ಚೆಗಳು ಹೆಚ್ಚಾಗಿವೆ. ಅದಕ್ಕೆ ಕಾರಣ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬಂದೊದಗಿರುವುದು. ಸೂಕ್ತ ಶಿಕ್ಷಣ, ತರಬೇತಿ ಹೊಂದಿದ, ಹೆಚ್ಚು ಸಂಬಳ ಪಡೆಯುತ್ತಿರುವ ಶಿಕ್ಷಕ ವರ್ಗವಿರುವ ಸರ್ಕಾರಿ ಶಾಲೆಗಳಿಗೆ ನಮ್ಮ ಗ್ರಾಮೀಣ ರೈತಾಪಿ, ಕೂಲಿ ಕಾರ್ಮಿಕ, ಶ್ರಮಿಕ ವರ್ಗದ ಜನರು ತಮ್ಮ ಮಕ್ಕಳನ್ನು ಕಳುಹಿಸಲು ಹಿಂಜರಿಯುತ್ತಿರುವುದಕ್ಕೆ ಕಾರಣಗಳೇನು ಎಂಬುದನ್ನು ಸರ್ಕಾರ ಗಂಭೀರವಾಗಿ ಚಿಂತಿಸಬೇಕಾಗಿದೆ. ನನ್ನ ಹಳ್ಳಿಯಿಂದ 15 ಕಿ.ಮೀ. ದೂರವಿರುವ ಪಟ್ಟಣದ ಕಾನ್ವೆಂಟ್‌ಗಳಿಗೆ 45 ವರ್ಷದ ಹಸುಳೆಗಳನ್ನು ಟೆಂಪೋ ಟ್ರಾಕ್ಸ್‌ಗಳಲ್ಲಿ ತುಂಬಿ ಕಳುಹಿಸುವುದನ್ನು ನಾನು ನೋಡಿದ್ದೇನೆ. ಹಳ್ಳಿಯ ಶಾಲೆ ಕಡುಬಡವರಿಗಾಗಿ ಮಾತ್ರ ಇದೆ ಎಂಬಂಥ ಪರಿಸ್ಥಿತಿ ಇದೆ. ಇದಕ್ಕೆ ಕಾರಣಗಳೇನು?

ಮೊದಲನೆಯದಾಗಿ ವ್ಯವಸ್ಥೆಯೇ ಸರ್ಕಾರಿ ಶಾಲೆಗಳ ಬಗ್ಗೆ ಕೀಳರಿಮೆಯನ್ನು ಬಿತ್ತಿರುವುದು. ಅಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಒಂದು ಕಾರಣವಾದರೆ, ಮಕ್ಕಳಿಗೆ ಮೊದಲ ಪಾಠವಾಗಬೇಕಾಗಿರುವ ಶಿಸ್ತು ಮತ್ತು ಸ್ವಚ್ಛತೆಯನ್ನು ಕಲಿಸಲು ನಮ್ಮ ಪ್ರಾಥಮಿಕ ಶಾಲೆಗಳು ಅಸಮರ್ಥವಾಗಿವೆ. ಎರಡನೆಯದಾಗಿ ಈ ದೇಶದ ಬೇನೆಯಾಗಿರುವ ತಾರತಮ್ಯತೆಯನ್ನು ಚಾಚುತಪ್ಪದೇ ಪೋಷಿಸಿಕೊಂಡು ಬರುತ್ತಿರುವುದು. ಉತ್ತರಭಾರತದ ಕೆಲವು ಹಳ್ಳಿಗಳಲ್ಲಿ ಇಂದಿಗೂ ಶಿಕ್ಷಕರೇ ಮಕ್ಕಳನ್ನು ತರಗತಿಗಳಲ್ಲಿ ಜಾತಿಯನ್ನಾಧರಿಸಿ ಸ್ಥಳ ನಿಯೋಜಿಸುವುದು ನಡೆದಿದೆ. ಕೆಲವು ಮಾತ್ರ ವರದಿಯಾಗಿ ಮರೆಯಾಗುತ್ತವೆ. ಮಧ್ಯಾಹ್ನದ ಊಟ ವ್ಯವಸ್ಥೆ ಜಾರಿಗೆ ಬಂದ ಮೇಲಂತೂ ಈ ತಾರತಮ್ಯತೆ ಢಾಳಾಗಿ ಕಾಣಿಸಿಕೊಳ್ಳುತ್ತಿದೆ. ಅಡುಗೆ ಮನೆಯಲ್ಲಿ ಯಾರಿರಬೇಕು, ಯಾರು ಯಾರಿಗೆ ಬಡಿಸಬೇಕು ಎಂಬುದನ್ನು ಜಾತಿಯೇ ನಿರ್ಧರಿಸುತ್ತದೆ. ಶಿಕ್ಷಕರು, ಪೋಷಕರು, ಶಾಲಾ ಮೇಲ್ವಿಚಾರಕರು ಎಲ್ಲರೂ ಈ ಅನುಕ್ತ ನೀತಿಗೆ ತಮ್ಮ ಕುರುಡುತನ ಪ್ರದರ್ಶಿಸುತ್ತಾರೆ. ಊಟದ ಕಾರಣದಿಂದ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದರೂ ಪಾಠದ ಗುಣಮಟ್ಟ ಕುಸಿಯುತ್ತಿರುವುದನ್ನು ಆಡಳಿತ ನಡೆಸುವ ಮಂದಿ ಗಮನಿಸಬೇಕಾದ ಅವಶ್ಯಕತೆ ಇದೆ.

ದೇಶ ಸ್ವಾತಂತ್ರ್ಯ ಪಡೆದು ಏಳು ದಶಕಗಳಾಗುತ್ತಾ ಬಂದರೂ ನಮಗೆ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲು ಸಾಧ್ಯವಾಗದೇ ಇರುವುದು ಶೋಚನೀಯ ಸಂಗತಿ. ಇದಕ್ಕೆ ಪ್ರಯತ್ನಗಳು ನಡೆದಿಲ್ಲವೆಂದಲ್ಲ. 134 ವರ್ಷಗಳಷ್ಟು ಹಿಂದೆಯೇ ಜ್ಯೋತಿಬಾ ಫುಲೆಯವರು ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕೆಂದು ಮೆಕಾಲೆ ಶಿಕ್ಷಣ ನೀತಿಯ ಪರಿಣಾಮಗಳನ್ನು ಅಭ್ಯಸಿಸಲು ಬಂದ ಹಂಟರ್ ಕಮಿಷನ್‌ಗೆ ಮನವಿ ಸಲ್ಲಿಸಿರುವುದು ಇತಿಹಾಸ. ಕನಿಷ್ಠ ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ತರಬೇಕೆನ್ನುವುದು ಅವರ ಆಶಯವಾಗಿತ್ತು ಅದಿನ್ನೂ ಆಶಯವಾಗಿಯೇ ಉಳಿದಿದೆ. ಅದನ್ನು ಸಾಕಾರಗೊಳಿಸಲು ಅವರು ತಮ್ಮ ಪತ್ನಿ ಸಾವಿತ್ರಿಬಾಯಿ ಅವರ ಜೊತೆಗೂಡಿ ಜಾತಿಶಕ್ತಿಗಳ ಪ್ರಬಲ ವಿರೋಧಗಳ ನಡುವೆಯೂ ಹೆಣ್ಣುಮಕ್ಕಳಿಗೂ ಸೇರಿದಂತೆ ಸಮಾನ ಶಾಲೆಗಳನ್ನು ಪ್ರಾರಂಭಿಸಿದರು.

1964 ರಲ್ಲಿ ನೇಮಕಗೊಂಡ ಕೊಠಾರಿ ಆಯೋಗವು ಸಮಾನ ಶಿಕ್ಷಣ ನೀತಿಯನ್ನು ಕುರಿತು ನೀಡಿದ ಸುದೀರ್ಘ ವರದಿಯು ಸಹ ನೆನೆಗುದಿಗೆ ಬಿದ್ದಿತು. ಒಂದು ದೇಶದ ಭವಿಷ್ಯವನ್ನು ತರಗತಿಗಳು ರೂಪಿಸುತ್ತವೆ ಎಂಬ ಘೋಷವಾಕ್ಯವನ್ನು ಕೊಟ್ಟ ಮಹತ್ವಾಕಾಂಕ್ಷೆಯ ವರದಿ ಅದು. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಮಹಾತ್ಮ ಗಾಂಧಿಯವರ ಬೆಂಬಲವೂ ಇತ್ತು. ಇಷ್ಟೆಲ್ಲ ತೆರೆಯ ಹಿಂದಿನ ತಾಲೀಮು ನಡೆದಿದ್ದರೂ 1968 ರಲ್ಲಿ ಮೊದಲ ಶಿಕ್ಷಣ ನೀತಿಯನ್ನು ರೂಪಿಸಿದಾಗಲೂ ಸಮಾನ ಶಿಕ್ಷಣ ನೀತಿಯನ್ನು ಬದಿಗೊತ್ತಲಾಯಿತು.

ಇವೆಲ್ಲವೂ ಸಂವಿಧಾನ ರಚನಾಕಾರರನ್ನು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಲು ಪ್ರೇರೇಪಿಸಿತ್ತು. ಅಲ್ಲಿಯೂ ಶ್ರೀಮಂತರು, ಭೂಮಾಲೀಕರು ವಿರೋಧ ವ್ಯಕ್ತಪಡಿಸಿದರು. ಅಂಬೇಡ್ಕರ್ ಇಂತಹ ಅನೇಕ ವಿಷಯಗಳಲ್ಲಿ ಒತ್ತಡಕ್ಕೆ ಮಣಿದು ಹಿಂದೆ ಸರಿಯಬೇಕಾಯಿತು. ಅವರು ತಮ್ಮ ಆಶಯಗಳನ್ನು ಸಂವಿಧಾನದ ಮೂಲಕ ಪೂರ್ಣವಾಗಿ ಸಾಕಾರಗೊಳಿಸಲು ಸಾಧ್ಯವಾಗಲಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆ. ಆದರೂ ಬಹುಸಂಖ್ಯಾತ ಕೆಳವರ್ಗದ ದಾರಿದೀಪವಾಗಬೇಕಾದ ಪ್ರಾಥಮಿಕ ಶಿಕ್ಷಣ ಉಚಿತವೂ, ಕಡ್ಡಾಯವೂ ಆಗಬೇಕೆಂಬ ಅವರ ನಿಲುವು ಮುಂದೊಂದು ದಿನ ಸಾಕಾರಗೊಳ್ಳಲಿ ಎಂಬ ನಿರೀಕ್ಷೆಯನ್ನಿಟ್ಟುಕೊಂಡು 45ನೇ ವಿಧಿಯನ್ನು ಸೇರಿಸಿದರು. ಆದರೆ ಆಳುವ ವರ್ಗಕ್ಕೆ ಅದು ಜಾರಿಯಾಗುವುದು ಬೇಕಾಗಿರಲಿಲ್ಲ. ಕೊನೆಗೂ ಸರ್ವೋಚ್ಚ ನ್ಯಾಯಾಲಯದ ಮಧ್ಯಪ್ರವೇಶದಿಂದ 1993ರಲ್ಲಿ ಶಿಕ್ಷಣ ಮೂಲಭೂತ ಹಕ್ಕಾಯಿತು.

ಆದರೇನು? ನಾವು ಕಾಯಿದೆಗಳನ್ನು ಮಾಡುವುದರಲ್ಲಿ ಶೂರರು. ಅವುಗಳನ್ನು ಕಾರ್ಯಗತಗೊಳಿಸಲು ನೂರಾರು ಅಡ್ಡಿಆತಂಕಗಳು ಎದುರಾಗುತ್ತವೆ. ಆದ್ದರಿಂದ ಇಂದಿಗೂ 'ರಾಷ್ಟ್ರೀಯ ಶಿಕ್ಷಣ ನೀತಿ' ಎಂಬುದು ಸಾಕಾರವಾಗಿಲ್ಲ. ಖಾಸಗಿ, ಅನುದಾನಿತ, ಸ್ಥಳೀಯ ಸರ್ಕಾರಿ, ಸರ್ಕಾರಿ ಇತ್ಯಾದಿಯಾಗಿ ವಿಂಗಡಗೊಂಡಿರುವ ಶಾಲೆಗಳು ಇಂದು ಶ್ರೀಮಂತ, ಅತಿ ಶ್ರೀಮಂತ, ಮಧ್ಯಮ ವರ್ಗ, ಬಡವ ಮತ್ತು ಕಡುಬಡವರಿಗೆ ಹಂಚಿಕೆಯಾಗಿರುವಂತೆ ತೋರುತ್ತದೆ. ಧರ್ಮ, ವರ್ಗ, ಜಾತಿ, ಲಿಂಗ, ಪ್ರದೇಶಗಳನ್ನು ಮೀರಿದ ಶಿಕ್ಷಣ ನೀತಿಯನ್ನು ರೂಪಿಸುವುದು ಇಂದಿನ ಅಗತ್ಯವಾಗಿದೆ.

■ ಮೂಚಿ

## ಮಾತೇ ಮುತ್ತು

★ ಸಾಮರ್ಥ್ಯವಿಲ್ಲದವನು ಹುತಾತ್ಮನಾಗುವ ಮೂಲಕ ಮಾತ್ರ ಖ್ಯಾತಿ ಗಳಿಸಬಲ್ಲ.

ಜಾರ್ಜ್ ಬರ್ನಾರ್ಡ್ ಷಾ

★ ತಂಡಪ್ರಯತ್ನ ಒಳ್ಳೆಯದು. ಕೆಲಸ ವಿಫಲವಾದಲ್ಲಿ ಬೇರೆಯವರನ್ನು ದೂರಲು ಅವಕಾಶ ಸಿಗುತ್ತದೆ.

ಚೀನೀ ಗಾದೆ

★ ನಮ್ಮ ಮನಸ್ಸುಗಳನ್ನು ಬಿಡುಗಡೆಗೊಳಿಸುವುದು ನಾವೇ; ಬೇರೆ ಯಾರೂ ಅಲ್ಲ.

ಬಾಬ್ ಮಾರ್ಲೆ

★ ಯಾವುದೇ ದೇಶ ಹೊಂದಬಹುದಾದ ಅತ್ಯುತ್ತಮ ಆಸ್ತಿಯೆಂದರೆ ಆರೋಗ್ಯವಂತ ಪ್ರಜೆಗಳು.

ವಿನ್‌ಸ್ಟನ್ ಚರ್ಚಿಲ್

★ ನಿಮ್ಮ ಹೃದಯವೇ ಜ್ವಾಲಾಮುಖಿಯಾದರೆ ಅಲ್ಲಿ ಹೂವು ಅರಳುವುದಾದರೂ ಹೇಗೆ?

ಖಲೀಲ್ ಗಿಬ್ರಾನ್

★ ಕೆಲವರು ಎಲ್ಲಿ ಹೋದರೂ ಸಂತೋಷ ಹರಡುತ್ತಾರೆ. ಇನ್ನು ಕೆಲವರು ಎಲ್ಲಿಗಾದರೂ ಹೋದರೆ ಸಾಕು, ಸಂತೋಷವಾಗುತ್ತೆ.

ಆಸ್ಕರ್ ವೈಲ್ಡ್

★ ದೇವರು ಮನುಷ್ಯನಲ್ಲಿದ್ದಾನೆ, ಆದ್ದರಿಂದ ಮನುಷ್ಯನ ಸೇವೆ ಮಾಡಿ. ಅದು ದೇವರನ್ನೂ ಪೂಜಿಸಿದಂತೆಯೇ.

ರಾಮಕೃಷ್ಣ ಪರಮಹಂಸ

★ ಅನ್ನವನು ಇಕ್ಕುವ ಅನ್ಯಜಾತನೆ ಕುಲಜ.

ಸರ್ವಜ್ಞ

★ ಸಂತೋಷ ಎನ್ನುವುದು ರೆಡಿಮೇಡ್ ಸಿಗುವುದಿಲ್ಲ. ಅದು ನಮ್ಮ ಕ್ರಿಯೆಗಳಿಂದ ಉಂಟಾಗುತ್ತದೆ.

ದಲೈ ಲಾಮಾ

★ ಪ್ರಪಂಚವನ್ನು ಮೋಹಿಸುವ ಧರ್ಮಗುರುವಿನ ಪಾಂಡಿತ್ಯವನ್ನು ಅನುಮಾನಿಸಿ.

ಉಮರ್ ಬಿನ್ ಖತ್ತಾಬ್

★ ಹೆಣ್ಣು ಸೃಷ್ಟಿ ಅಲ್ಲ, ಸೃಜನಶೀಲೆ. ಆಕೆ ದೇವರ ಕಿರಣ.

ರೂಮಿ

★ ಒಬ್ಬ ವ್ಯಕ್ತಿ ಒಂದು ತತ್ವಕ್ಕಾಗಿ ಸಾಯಬಹುದು. ಆದರೆ ಆತ ಸತ್ತ ಬಳಿಕ ಆ ತತ್ವ ಸಾವಿರ ಜೀವಗಳಲ್ಲಿ ಕುಡಿಯೊಡೆಯುತ್ತದೆ.

ಸುಭಾಶ್‌ಚಂದ್ರ ಬೋಸ್